ದೀಪಕ್ ಕರೆ ಮಾಡಿ, ''ಮೂರ್ತಿ ಸಾಬ್, ನೀವು ಬರುತ್ತೀರಾದರೆ ನಾಳೆಯೇ ಬನ್ನಿ, ಸುಭಾಷ್ ಬಗ್ಗೆ ವಿಚಾರಿಸ್ತಾ ಇರ್ತೀರಲ್ವ, ನಾಳೆ ಅವನೂ ಸಿಗ್ತಾನೆ. ಹೇಗೂ ಮುಂಬಯಿಗೆ ಬಂದವರಿದ್ದೀರಿ, ನಮಗೂ ನಿಮ್ಮನ್ನು ನೋಡಿದ ಹಾಗಾಗ್ತದೆ, ಎಷ್ಟು ವರ್ಷ ಆಯ್ತು ಭೇಟಿಯಾಗಿ!'' ಅಂತ ಆತ್ಮೀಯವಾಗಿ ಬರ ಹೇಳಿದ್ದ. ಥಾನೆಯಿಂದ ಬದಲಾಪುರಕ್ಕೆ ಲೋಕಲ್ಲಿನಲ್ಲಿ ಸುಮಾರು ಮುಕ್ಕಾಲು ಗಂಟೆಯ ಪ್ರಯಾಣ. ಹೋಗಿ ಬರುವುದೇನೂ ದೊಡ್ಡ ವಿಷಯವಲ್ಲ. ಆದರೆ, ನಾಳೆಯೇ ಅಂಧೇರಿಗೆ ಹೋಗಿ ನನ್ನ ಬಂಧು ಸುಬ್ರಮಣಿಯಮ್‌ರನ್ನು ಕಾಣುವುದಕ್ಕಿತ್ತು. ನಾನು ಬೊಂಬೈಗೆ ಬಂದ ಮುಖ್ಯ ಉದ್ದೇಶವೇ ಅದು. ಅಂದ ಹಾಗೆ, ನಾನಿಲ್ಲಿ ಇದ್ದ ಸಮಯದಲ್ಲಿ ಮುಂಬಯಿ ಬೊಂಬೈ ಎಂದೇ ಕರೆಯಲ್ಪಡುತ್ತಿತ್ತು ಮಾತ್ರವಲ್ಲ, ಅದೇ ಹೆಸರು ಎಷ್ಟು ಒಗ್ಗಿ ಹೋಗಿತ್ತು ಎಂದರೆ ಮುಂಬಯಿ ಎನ್ನಲು ಅಷ್ಟು ಆಪ್ತವಾಗುತ್ತಿರಲಿಲ್ಲ. ಮರಾಠಿ ಮಾತಾಡಲು ಕಲಿತ ಮೇಲೆ, ಮರಾಠಿಗರ ಪ್ರೀತಿಯ 'ಅಮ್ಚಿ ಮುಂಬಯಿ'ಯಿಂದಾಗಿ ನನಗೂ ಮುಂಬಯಿ ಹೆಸರು ಅಭ್ಯಾಸವಾಯಿತು. ಮುಂಬಯಿಗೆ ಬಂದು ಮರಾಠಿ ಕಲಿಯಲು ನನಗೆ ಫಿಯಟ್ ಕಂಪನಿ ಸೇರಿದ ಮೇಲಷ್ಟೇ, ಅದೂ ಐದಾರು ವರ್ಷಗಳ ಅನಂತರವೇ. ಅಂದರೆ, ಮುಂಬಯಿಗೆ ಬಂದು ಏಳೆಂಟು ವರ್ಷಗಳ ಬಳಿಕವೇ ಸಾಧ್ಯವಾದದ್ದು. ಅದಕ್ಕೆ ಕಾರಣ ಸುಭಾಷ್ ಎಂದೇ ಹೇಳಬಹುದು. ನನಗೆ ಮರಾಠಿ ಭಾಷೆ ಅರ್ಥವಾಗುತ್ತಿರಲಿಲ್ಲ ಎಂದು ಗೊತ್ತಿದ್ದೂ ನನ್ನೊಡನೆ ಮರಾಠಿಯಲ್ಲೇ ಮಾತಾಡ್ತಿದ್ದ. ಒಂದು ರೀತಿಯಲ್ಲಿ ಬಲವಂತದ ಕಲಿಯುವಿಕೆ ನನಗೆ.

ಕುರ್ಲಾದ ಫಿಯಟ್ ಕಂಪನಿಯಲ್ಲಿ ನನಗೆ ನೌಕರಿ ಸಿಕ್ಕಾಗ ಖುಷಿ ಪಟ್ಟು, ಅಂಧೇರಿಯ ಮನೆಗೆ ಆಹ್ವಾನಿಸಿ, ಸತ್ಕರಿಸಿ ಸಂಭ್ರಮ ಪಟ್ಟವರು ಸುಬ್ರಮಣಿಯಮ್. ಫಿಯಟ್ ಆ ಕಾಲಕ್ಕೆ ಮುಂಬಯಿ ಮಾತ್ರ ಅಲ್ಲ, ಮಹಾರಾಷ್ಟ್ರದಲ್ಲೇ ಅತೀ ಹೆಚ್ಚು ಪಗಾರ ಕೊಡುವ ಕಂಪನಿಯಾಗಿತ್ತು. ದೀಪಾವಳಿ ಬೋನಸ್ಸು ಎಂದರೆ ಉಳಿದವರೆಲ್ಲ ಹೊಟ್ಟೆಕಿಚ್ಚು ಪಟ್ಟುಕೊಳ್ಳುವಂತಹದ್ದಾಗಿತ್ತು. ಸುಬ್ರಮಣಿಯಮ್ ಫಿಯಟ್ ಕಂಪನಿಗೆ ಬಿಡಿಭಾಗಗಳನ್ನು ತಯಾರಿಸಿ ಕಳುಹಿಸುವ ಸಣ್ಣ ಉದ್ಯಮಿ. ಆಮೇಲೆ ಆಗಾಗ ಅವರ ಮನೆಗೆ ಹೋಗ್ತಾ ಇದ್ದೆ. ''ನೋಡು ರಾಮಮೂರ್ತಿ, ಅಲ್ಲಿ ಯೂನಿಯನ್ ಸ್ಟ್ರಾಂಗ್ ಉಂಟು. ಹಾಗಾಗಿ, ಜಾಗ್ರತೆ ಮಾರಾಯ'' ಅಂತ ಎಚ್ಚರಿಸಿದ್ದೂ ಉಂಟು. ನಾನು ಮುಂಬಯಿ ಬಿಟ್ಟು ಬೆಂಗಳೂರಿಗೆ ಬಂದ ಮೇಲೂ, ''ಒಮ್ಮೆ ಅಂಧೇರಿಗೆ ಬಾ'' ಎನ್ನುವ ಒತ್ತಾಯ ಸದಾ ಇದ್ದೇ ಇತ್ತು. ಆದರೆ, ಹೋಗುವುದು ಮಾತ್ರ ಸಾಧ್ಯವಾಗಿರಲಿಲ್ಲ. ಹೇಗೂ ಆಫೀಸಿಗೆ ನಾಲ್ಕು ದಿನ ರಜೆ ಇತ್ತು, ಮುಂಬಯಿಯ ಬಂಧುಗಳನ್ನೂ ಗೆಳೆಯರನ್ನೂ ಕಾಣಲು ಒಳ್ಳೆಯ ಅವಕಾಶ ಅಂತ ಯೋಚನೆ ಮಾಡಿ ಹೊರಟು ಬಂದೆ. ''ನಾಳೆಯೇ ನಿಮ್ಮಲ್ಲಿಗೆ ಬರುತ್ತೇನೆ'' ಎಂದು ಸುಬ್ರಮಣಿಯಮ್‌ಗೆ ತಿಳಿಸಿಯೂ ಆಗಿತ್ತು. ಬದಲಾಪುರಕ್ಕೆ ಹೋದರೆ ಇಡೀ ದಿನ ಆಗುತ್ತದೆ. ಆದರೆ, ನಾಳೆಯೇ ಅಲ್ಲಿಗೆ ಹೋದರೆ ಸುಭಾಷನನ್ನೂ ಕಂಡ ಹಾಗಾಗ್ತದೆ. ನಾಡಿದ್ದು ಆತ ರತ್ನಗಿರಿಗೆ ಹೋಗುತ್ತಾನಂತೆ, ಆಮೇಲೆ ಮೂರು ತಿಂಗಳು ಸಿಗಲಾರ. ಆಫೀಸಿನಲ್ಲಿ 'ಮೂರ್ತಿ ಸಾಬ್' ಎನ್ನುವ ಹೆಸರನ್ನು ನನಗಿತ್ತವನೇ ಅವನು. ನನಗೆ ಕುತೂಹಲಕಾರೀ ವ್ಯಕ್ತಿಯಾಗಿ ಕಂಡಿದ್ದ ಆತ. ನೋಡಿ ಒಮ್ಮೆ ಮಾತಾಡಿಸಿದರಾಯಿತು. ದೀಪಕ್

